ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**O.S. No.503/2020 DW.-1.**

ದಿನಾಂಕ:**07.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿಯರ ಪರ ಶ್ರೀ ಪಿ ಜಿ ವಕೀಲರಿಂದ:-

ನಾನು 2 ನೇ ತರಗತಿ ಓದಿರುತ್ತೇನೆ. ನಾನು ಗಾರೆ ಕೆಲಸ ಮಾಡುತ್ತೇನೆ. ನಾನು ರೈಲ್ವೆ ಇಲಾಖಾ ನೌಕರ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ರೈಲ್ವೆ ಇಲಾಖೆಯಲ್ಲಿಯೇ ಗಾರೆ ಕೆಲಸ ಮಾಡುತ್ತಿದ್ದೆ. ನಾನು ನಿವೃತ್ತನಾಗಿ 10 ವರ್ಷವಾಗಿದೆ. ಅಸೆಸ್ ಮೆಂಟ್ ನಂ.3219/3125 ರ ಸ್ವತ್ತು ನನ್ನ ಸ್ವತ್ತಿನ ಪಕ್ಕದ ಸ್ವತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಸ್ವತ್ತಿನ ಅಸೆಸ್ ಮೆಂಟ್ ಸಂಖ್ಯೆ 3218/3124 ಆಗಿದ್ದು ಇದು ಮಾತ್ರ ನನಗೆ ಗೊತ್ತಿದೆ. ಇದರ ಚೆಕ್ಕುಬಂಧಿ ಪೂರ್ವಕ್ಕೆ ಪಾರ್ವತಮ್ಮ ಮತ್ತು ಪೂಜಾರಿ ಬೋವಿ, ಪಶ್ಚಿಮಕ್ಕೆ ಭೀಮಾ ಬೋವಿ ಮತ್ತು ಅಡಿವೆ ಭೋವಿ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪುರಸಭೆ ರಸ್ತೆ ಇದೆ.

ಅಸೆಸ್ ಮೆಂಟ್ ಸಂಖ್ಯೆ 3219/3125 ರ ವಾದಿಯ ಸ್ವತ್ತಿನ ದಕ್ಷಿಣಕ್ಕೆ ನನ್ನ ಸ್ವತ್ತು ಬರುತ್ತದೆ ಎಂದರೆ ಸರಿಯಲ್ಲ. ಎರಡು ಕಡೆಗೂ ಅವರದ್ದೆ ಮನೆ ಇದ್ದು ಮದ್ಯದಲ್ಲಿ ನನ್ನ ಮನೆ ಇದೆ. ಅಸೆಸ್ ಮೆಂಟ್ ಸಂಖ್ಯೆ 3217/3123 ರ ಸ್ವತ್ತಿನ ಉತ್ತರಕ್ಕೆ ನಮ್ಮ ಸ್ವತ್ತು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಸ್ವತ್ತಿನ ಉತ್ತರಕ್ಕೆ ಪಾರ್ವತಮ್ಮ ಮತ್ತು ಪೂಜಾರಿ ಭೋವಿ, ದಕ್ಷಿಣಕ್ಕೆ ಭೀಮಾ ಬೋವಿ ಅಡಿವೆ ಭೋವಿ ಸ್ವತ್ತು ಇದೆ. ದಾವಾ ಅನುಸೂಚಿ ಎ ಮತ್ತು ಬಿ ಸ್ವತ್ತಿನ ನಡುವೆ ನನ್ನ ಸ್ವತ್ತು ಇದೆ ಎಂದರೆ ಸರಿ.

ವಾದಿ ರವಿರವರು ನನಗೆ ಗೊತ್ತು. ವಾದಿ ವಿಕಲಚೇತನರು ಎಂದರೆ ಸರಿ. ನನ್ನ ಸ್ವತ್ತಿನ ಎರಡ ಕಡೆಯೂ ವಾದಿಯ ಮನೆ ಇದ್ದು ಆ ಮನೆಗಳನ್ನು ಹೊರತು ಪಡಿಸಿ ಅವರಿಗೆ ವಾಸಮಾಡಲು ಬೇರೆ ಮನೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮತ್ತು ವಾದಿಯ ಮನೆಯ ನಡುವೆ ಒಂದೇ ಗೋಡೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಗೋಡೆಗೆ ಅವರ ಮನೆಯ ಛಾವಣಿಯನ್ನು ಜೋಡಿಸಿ ಕೊಂಡಿರುತ್ತಾರೆ. ಸದರಿ ಗೋಡೆಯು 70 ವರ್ಷಗಳಷ್ಟು ಹಳೆಯ ಮಣ್ಣಿನ ಗೋಡೆ ಎಂದರೆ ಸರಿ. ಆ ಗೋಡೆ ಕಟ್ಟುವಾಗ ನಾನು ಮತ್ತು ವಾದಿ ಜನಿಸಿರಲಿಲ್ಲ ಎಂದರೆ ಸರಿ. ಅಂದರೆ ಒಂದೇ ಗೋಡೆಯ ಮೇಲೆ ಎರಡು ಮನೆಗಳ ಛಾವಣಿ ನಿಂತಿದೆ ಎಂದರೆ ಸರಿಯಲ್ಲ, ಅದು ನಮ್ಮ ಮನೆಯ ಗೋಡೆಯಾಗಿರುತ್ತದೆ. ಈಗ ಸದರಿ ಒಂದೇ ಗೋಡೆಯ ಮೇಲೆ ಎರಡು ಮನೆಗಳು ನಿಂತಿವೆ ಎಂದರೆ ಸರಿ. ಸದರಿ ಗೋಡೆ ತೆಗೆದರೆ ಎರಡೂ ಮನೆಗಳಿಗೆ ಹಾನಿಯಾಗುತ್ತದೆ ಎಂದರೆ ಸರಿಯಲ್ಲ, ಅದು ನಮ್ಮ ಗೋಡೆಯಾಗಿರುತ್ತದೆ.

ನಾನು ಮನೆ ಕಟ್ಟುವ ಸಲುವಾಗಿ ಸದರಿ ಗೋಡೆಯನ್ನು ಕೆಡವಲು ದಿಃ05.11.2020 ರಂದು ಪ್ರಯತ್ನಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಪುರಸಭೆಯಿಂದ ಅನುಮತಿ ಪಡೆದು ಮನೆ ಕೆಡವಲು ಮುಂದಾಗಿರುತ್ತೇನೆ.

ಪುರಸಭೆಗೆ ಹಳೆಯ ಮಣ್ಣಿನ ಗೋಡೆಯನ್ನು ತೆಗೆದು ಬೇರೆ ಬಲವಾದ ಗೋಡೆಯನ್ನು ಕಟ್ಟಿಕೊಳ್ಳಲು ಅನುಮತಿ ನೀಡಿ ಎಂದು ಅರ್ಜಿ ನೀಡಿದ್ದೆ, ಅದಕ್ಕೆ ಅವರು ಗೋಡೆ ನಿರ್ಮಿಸಬಹುದು ಎಂದು ಅನುಮತಿ ನೀಡಿದ್ದರು. ನಂತರ ನಾನು ಅಳತೆ ಮಾಡಲು ಅರ್ಜಿ ನೀಡಿದ್ದೆ. ಅಳತೆ ಮಾಡಲು ನೀಡಿದ್ದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪುರಸಭೆಯವರು ಮನೆ ಕೆಡವಲು ನನಗೆ ಅನುಮತಿ ನೀಡಿರುತ್ತಾರೆ, ಅದರಲ್ಲಿ ಮನೆ ಕೆಡವುವಾಗ ಯಾವುದೇ ಸರ್ಕಾರಿ, ಖಾಸಗಿ, ಸಾರ್ವಜನಿಕ ಸ್ವತ್ತಿಗೆ ಹಾನಿಯಾಗದಂತೆ ಕೆಡವಬೇಕು ಎಂದು ಷರತ್ತುಗಳನ್ನು ಹಾಕಿರುತ್ತಾರೆ ಎಂದರೆ ಸರಿ.

ವಾದಿ ಮತ್ತು ಅವರ ಕುಟುಂಬದವರು ನನ್ನ ಮೇಲೆ ಪೊಲೀಸ್ ಠಾಣೆಗೆ ಹೋಗಿ ಗೋಡೆ ಕೆಡವುತ್ತಿದ್ದಾರೆ ಎಂದು ದೂರು ನೀಡಿರುತ್ತಾರೆ ಎಂದರೆ ಸರಿ. ಠಾಣೆಗೆ ನನ್ನನ್ನು ಕರೆಸಿದ್ದಾಗ ನಾನು ಠಾಣೆಯಲ್ಲಿ ಗೋಡೆ ತೆಗೆಯುವುದಿಲ್ಲ ಎಂದು ಒಪ್ಪಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ, ನಾನು ಏನನ್ನು ಹೇಳಿರುವುದಿಲ್ಲ.

ನಿಡಿ 15 ರ ಪೋಟೋದಲ್ಲಿ ಕಾಣುವ ಮದ್ಯದ ಮನೆ ನನ್ನದು ಹಾಗೂ ಅಕ್ಕ-ಪಕ್ಕದಲ್ಲಿರುವ ಮನೆಗಳು ವಾದಿಯದ್ದು ಎಂದರೆ ಸರಿ. ಸದರಿ ಎರಡೂ ಮನೆಗಳಿಗೂ ಒಂದೇ ಗೋಡೆ ಇರುತ್ತದೆ ಎಂದರೆ ಸರಿ. ಮದ್ಯದಲ್ಲಿರುವ ಮನೆಯ ಗೋಡೆಯನ್ನು ಒಡೆದು ತೆಗೆದರೆ ವಾದಿಯ ಎರಡೂ ಮನೆಗಳಿಗೂ ಹಾನಿಯಾಗಿ ನಷ್ಟವಾಗುತ್ತದೆ ಮತ್ತು ಸದರಿ ಗೋಡೆ ಇಬ್ಬರಿಗೂ ಸೇರಿದ್ದು ಎಂದರೆ ಸರಿಯಲ್ಲ, ಅದು ನನ್ನ ಮನೆಯ ಗೋಡೆ. ಸದರಿ ಗೋಡೆಗಳ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಹಿತಾಶಕ್ತಿ ಇಲ್ಲದಿದ್ದರು ಸಹಃ ವಾದಿಗೆ ತೊಂದರೆ ಕೊಡಲು ಅದನ್ನು ಒಡೆದು ಹಾಕುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆರ್ಥಿಕವಾಗಿ ಪ್ರಭಲವಾಗಿದ್ದು ನನ್ನ ಪ್ರಭಾವ ಬೀರಿಸಿ ವಾದಿಗಳಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಯನ್ನು ಅಳತೆ ಮಾಡಿಸಿಲ್ಲ ಎಂದರೆ ವಾದಿಯು ಅಳತೆ ಮಾಡಿಸಲು ಬಿಟ್ಟಿರುವುದಿಲ್ಲ. ಗೋಡೆ ಬೀಳಿಸಿದರೆ ವಾದಿಯ ಎರಡೂ ಮನೆಗಳು ಬೀಳುತ್ತದೆ ಎಂದರೆ ಸರಿಯಲ್ಲ. ಸದರಿ ಗೋಡೆ ಕೆಡವಿದರೆ ಮನೆ ಬೀಳುತ್ತದೆ ಎಂದು ಗೊತ್ತಿದ್ದರು ಸಹಃ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.